# ‘ದೇವರಕಾಡು ಸಂರಕ್ಷಣೆಗೆ ಅನುದಾನ ಕೊರತೆ’

**ಪ್ರಜಾವಾಣಿ ವಾರ್ತೆ**



ಸಾಗರದ ಮಲೆನಾಡು ಸಿರಿ ಸಭಾಂಗಣದಲ್ಲಿ ಶುಕ್ರವಾರ ದೇವರಕಾಡುಗಳ ಕುರಿತು ಜಾಗೃತಿ ಕಾರ್ಯಾಗಾರದಲ್ಲಿ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಅವರ ನೇತೃತ್ವದಲ್ಲಿ ವರದಾ ನದಿ ಜಲಾನಯನದ ಪರಿಸರ ಪರಿಸ್ಥಿತಿ ಕುರಿತ ವರದಿಯನ್ನು ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ ಪಿ.ಪಿ.ಬ್ಯಾನರ್ಜಿ ಬಿಡುಗಡೆ ಮಾಡಿದರು.

ಸಾಗರ: ವರದಾನದಿ ಜಲಾನಯನ ಪರಿಸರದ ಪರಿಸ್ಥಿತಿ ಕುರಿತು ಪರಿಸರ ಸಂಘಟನೆಗಳು ನೀಡಿರುವ ವರದಿಯನ್ನು ಗಂಭೀರವಾಗಿ ಪರಿಗಣಿಸಿ ಅದನ್ನು ಪರಿಪಾಲಿಸುವ ಹಾಗೂ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯಿಂದ ಪ್ರಯತ್ನ ನಡೆಸಲಾಗುವುದು ಎಂದು ಉಪ ವಲಯ ಅರಣ್ಯ ಸಂರಕ್ಷಣಾ ಅಧಿಕಾರಿ ಪಿ.ಪಿ.ಬ್ಯಾನರ್ಜಿ ಹೇಳಿದರು.

ಮಲೆನಾಡುಸಿರಿ ಸಭಾಂಗಣದಲ್ಲಿ ಭೀಮನಕೋಣೆ ಗ್ರಾಮ ಅರಣ್ಯ ಸಮಿತಿ, ವೃಕ್ಷಲಕ್ಷ ಆಂದೋಲನ, ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರ ಹಾಗೂ ಗ್ರಾಮಾಂತರ ಸಮುದಾಯ ವಿಜ್ಞಾನ ಕೇಂದ್ರದ ವತಿಯಿಂದ ಶುಕ್ರವಾರ ದೇವರಕಾಡುಗಳ ಕುರಿತು ಜಾಗೃತಿ ಕಾರ್ಯಾಗಾರದಲ್ಲಿ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಅವರ ನೇತೃತ್ವದಲ್ಲಿ ವರದಾ ನದಿ ಜಲಾನಯನದ ಪರಿಸರ ಪರಿಸ್ಥಿತಿ, ಅಂತರ್ಜಲ ಸ್ಥಿತಿ ಕುರಿತು ವೃಕ್ಷಲಕ್ಷ ಆಂದೋಲನದ ಸಹಕಾರದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ವರದಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ದೇವರಕಾಡು ಸಂರಕ್ಷಣೆಗೆ ಸಂಬಂಧಪಟ್ಟಂತೆ ಅನುದಾನದ ಕೊರತೆ ಇದೆ. ಯೋಜನೆಯನ್ನು ಯಾವುದದೇ ಕಾರಣಕ್ಕೂ ಇಲಾಖೆ ಕೈಬಿಡುವುದಿಲ್ಲ. ಈ ಸಾಲಿನಲ್ಲಿ ಕಾನುಅರಣ್ಯ ಸಂರಕ್ಷಣೆಗಾಗಿ ₹ 4 ಕೋಟಿ ಬಿಡುಗಡೆಯಾಗಿದ್ದು, 112 ಎಕರೆ ಅರಣ್ಯ ಪ್ರದೇಶದಲ್ಲಿ ಕಂದಕ ತೋಡಿ ಗಿಡ ನೆಡುವ ಕೆಲಸಕ್ಕೆ ಟೆಂಡರ್ ಕರೆಯಲಾಗಿದೆ’ ಎಂದರು.

ಡೀಮ್ಡ್ ಫಾರೆಸ್ಟ್ ಯೋಜನೆಯಿಂದ ಅರಣ್ಯ ರಕ್ಷಣೆಗೆ ಹೆಚ್ಚಿನ ಪ್ರಾಮುಖ್ಯತೆ ಸಿಕ್ಕಿದೆ. ಅರಣ್ಯ ಅತಿಕ್ರಮಣ ಮಾಡುವವರ ವಿರುದ್ಧ ಯೋಜನೆಯಡಿ ಕ್ರಮ ಕೈಗೊಳ್ಳಲು ಹಾಗೂ ತೆರವುಗೊಳಿಸಲು ಅವಕಾಶವಿದೆ. ಮರಗಳನ್ನು ಕಡಿಯುವುದು ಪಾಪದ ಕೆಲಸ. ಆದರೂ ಮರಗಳನ್ನು ಕಡಿಯಲೆಂದೇ ಸಂಘವೊಂದು ಹುಟ್ಟಿಕೊಂಡಿದೆ. ಪರಿಸರದ ಬಗ್ಗೆ ನಾವು ಚಿಂತನೆ ನಡೆಸದೆ ಹೋದರೆ ಮುಂದಿನ ಪೀಳಿಗೆ ಮಾರಕ ಪರಿಣಾಮ ಎದುರಿಸಬೇಕಾಗುತ್ತದೆ ಎಂದರು.

ಪಶ್ಚಿಮಘಟ್ಟ ಕಾರ್ಯಪಡೆಯ ನಿಕಟಪೂರ್ವ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಮಾತನಾಡಿ, ‘ದೇವರಕಾಡುಗಳು, ಪರಿಸರ, ಕೆರೆ, ನದಿಗಳ ಸಂರಕ್ಷಣೆಯಲ್ಲಿ ಸರ್ಕಾರದ ಜೊತೆ ನಮ್ಮ ಪಾಲ್ಗೊಳ್ಳುವಿಕೆ ಸಹ ಅಗತ್ಯ. ಶಿಕ್ಷಣ ಸಂಸ್ಥೆಗಳ ಮೂಲಕ ಪರಿಸರ ಜಾಗೃತಿ ಕಾರ್ಯಯೋಜನೆ ರೂಪಿಸಿ ಅದನ್ನು ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ತಿಳಿಸುವ ಕೆಲಸವಾಗಬೇಕು’ ಎಂದರು.

‘80ರ ದಶಕದಲ್ಲಿ ಗ್ರಾಮಗಳ ಸಾಮಾಜಿಕ ಭೂಮಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹಮ್ಮಿಕೊಂಡಿದ್ದ ಜನಾಂದೋಲನ ಮಾದರಿಯಲ್ಲಿಯೇ ನಮ್ಮ ಗೋಮಾಳ, ಅರಣ್ಯಭೂಮಿ, ಪರಿಸರ, ನೈಸರ್ಗಿಕ ಸಂಪನ್ಮೂಲ ರಕ್ಷಣೆಗೆ ಜಿಲ್ಲೆಯ ಜನರು ಮತ್ತೊಂದು ಸುತ್ತಿನ ಹೋರಾಟ ಕೈಗೆತ್ತಿಕೊಳ್ಳುವ ಅಗತ್ಯವಿದೆ. ಸಾಗರ, ಸೊರಬ, ಹೊಸನಗರ ಭಾಗದಲ್ಲಿ ದೇವರಕಾಡು ಸಂರಕ್ಷಣೆ ಯೋಜನೆ ನಿಲ್ಲಿಸಿರುವ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕು’ ಎಂದರು.

ಭೀಮನಕೋಣೆ ಗ್ರಾಮ ಅರಣ್ಯ ಸಮಿತಿ ಅಧ್ಯಕ್ಷ ಬಿ.ಎಚ್.ರಾಘವೇಂದ್ರ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ, ಪರಿಸರ ತಜ್ಞ ಪ್ರೊ. ಬಿ.ಎಂ.ಕುಮಾರಸ್ವಾಮಿ, ವೆಂಕಟೇಶ್ ಕವಲಕೋಡು ಉಪಸ್ಥಿತರಿದ್ದರು.